ಇಂದು ದಿಃ **19-04-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಜಿ.ಪಿ ಯವರಿಂದ ಪ್ರತಿವಾದಿಗಳ ಪರಃ**

ಮಲ್ಲಣ್ಣನವರ ಶಂಕರಪ್ಪ ನನ್ನ ತಮ್ಮನಾಗಬೇಕು. ಆತ ಕಾಣೆಯಾದ ಒಂದು ವಾರದ ನಂತರ ನನಗೆ ಗೊತ್ತಾಗಿರುತ್ತದೆ. ನನಗೆ ಆತ ಒಬ್ಬನೇ ಸಹೋದರ. ದಾವಾ ಆಸ್ತಿ ಹೊರತುಪಡಿಸಿ, ನನಗೆ ಬೇರೆ ಜಮೀನು ಇರುವುದಿಲ್ಲ. ಶಂಕರಪ್ಪ ಈತನಿಗೆ ಕಿವಿ ಕೇಳುತ್ತಿರಲಿಲ್ಲ ಮತ್ತು ಮೂಕ ಇದ್ದನು. ಕಾಣೆಯಾಗಿದ್ದಾನೆ ಎಂದು ಪಿರ್ಯಾದಿಕೊಟ್ಟಿದ್ದೆನು. ಆತ ಕಾಣೆಯಾದ ಸುಮಾರು 12 ವರ್ಷ ಆಗಿದೆ. 12 ವರ್ಷಗಳ ಹಿಂದೆ ಪಿರ್ಯಾದಿಕೊಟ್ಟಿದ್ದೆನು. ಪಿರ್ಯಾದಿಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ದಿನಪತ್ರಿಕೆಯಲ್ಲಿ ಪ್ರಕಟಣೆ ತೆಗೆದುಕೊಂಡಿದ್ದೆನು, ಅದನ್ನು ಹಾಜರುಪಡಿಸಿದ್ದೇನೆ. ಒಂದು ವೇಳೆ ನನ್ನ ತಮ್ಮ ಭವಿಷ್ಯ ಕಾಲದಲ್ಲಿ ಪತ್ತೆಯಾದರೆ ಆತನ ಹಿಸ್ಸೆ ಆತನಿಗೆ ಕೊಡಲು ತಯಾರು ಇದ್ದೇನೆ. ಈ ಎಲ್ಲಾ ದಾಖಲೆಗಳನ್ನು ಈ ದಾವೆಗೆ ಅನುಕೂಲ ಆಗಲಿ ಎಂದು, ಸೃಷ್ಠಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರನ ನಡುವೆ ಆಸ್ತಿ ಕುರಿತು ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಆತನ ಮದುವೆ ಆಗಿರಲಿಲ್ಲ. ನಾನು ಕೇಳಿದ ಪರಿಹಾರಕ್ಕೆ ನಾನು ಅರ್ಹ ಅಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.